

ಅಂತರಿಕ್ಷಯಾನವನ್ನು ಆರಂಭಿಸಿದ ಒಂದು ನಿಮಿಷದ ಸುಮಾರಿಗೇ ಸ್ಫೋಟಿಸಿ ಏಳು ಜನ ಗಗನಯಾತ್ರಿಗಳ ಸಾವಿಗೆ ಕಾರಣವಾದ 'ಛಾಲೆಂಜರ್ ಶಟಲ್' ಸಿಡಿಯುತ್ತಿರುವ ದೃಶ್ಯ. ಚಿತ್ರಕೃಪೆ: 'ನಾಸಾ'

ಗಗನಯಾತ್ರಿಗಳು ಮಡಿದರು.

ಸೇನಾ ದೃಷ್ಟಿಯೂ ಸೇರಿದಂತೆ ಬಹು ಉದ್ದೇಶಗಳಿಂದ ಅಂತರಿಕ್ಷ ಶಟಲ್ ಅನ್ನು ರೂಪಿಸಿದ ಅಮೆರಿಕ, 1991ರ ಅಂತ್ಯದಲ್ಲಿ ಸೋವಿಯತ್ ಒಕ್ಕೂಟದ ಕುಸಿತದೊಂದಿಗೆ 'ಶೀತಲ ಸಮರ' ಅಂತ್ಯವಾದಂತೆ ಪ್ರಜಾಪ್ರಭುತ್ವವಾದಿ ರಷ್ಯಾದೊಡನೆ ಅಂತರಿಕ್ಷ ಚಟುವಟಿಕೆಗಳಲ್ಲಿ ಸಹಕರಿಸಲಾರಂಭಿಸಿತು. ಹೀಗಾಗಿ ಅಮೆರಿಕದ ಶಟಲ್ ಭೂಕಕ್ಷೆಯಲ್ಲಿ ರಷ್ಯಾದ 'ಮಿಯರ್' ಅಂತರಿಕ್ಷ ನಿಲ್ದಾಣಕ್ಕೆ ಭೇಟಿ ನೀಡುವುದು ಪ್ರಾರಂಭವಾಯಿತು. ಈ ಬೆಳವಣಿಗೆಯೇ ಮುಂದೆ 'ಅಂತರರಾಷ್ಟ್ರೀಯ ಅಂತರಿಕ್ಷ ನಿಲ್ದಾಣ' (ಐ.ಎಸ್.ಎಸ್.) ಎಂಬ ಬೃಹತ್ ಅಂತರಿಕ್ಷ ನೌಕೆಯ ಹಂತಹಂತವಾದ ನಿರ್ಮಾಣಕ್ಕೆ ಎಡೆಮಾಡಿಕೊಟ್ಟಿತು. ಒಂದು ಫುಟ್‌ಬಾಲ್ ಮೈದಾನದಷ್ಟು ದೊಡ್ಡದಾದ ಆ ನೌಕೆಯಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಗಗನಯಾತ್ರಿಗಳು ನಿರಂತರವಾಗಿ ವಾಸಿಸುತ್ತಿದ್ದಾರೆ. ಇವರಲ್ಲಿ ಅಮೆರಿಕನ್ನರು, ರಷ್ಯನ್ನರಲ್ಲದೇ ಬೇರೆ ಬೇರೆ ದೇಶಗಳ ಗಗನಯಾತ್ರಿಗಳೂ ಸೇರಿದ್ದಾರೆ.

## ಅಂತರಿಕ್ಷ ನಿಲ್ದಾಣಗಳ ಮಹತ್ವ

ಅಂತರಿಕ್ಷ ನಿಲ್ದಾಣಗಳಿಂದಾಗಿ ಇಂದು ದೀರ್ಘಕಾಲದ ಅಂತರಿಕ್ಷಯಾನದ ನಡುವೆ ಮಾನವ ದೇಹದ ವರ್ತನೆಯ ಬಗ್ಗೆ ಅಪಾರವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇದು ತನ್ನ ಮುಂದಿನ ಗುರಿಯಾದ ಮಂಗಳಗ್ರಹದ ಯಾನವನ್ನು ಮಾನವ ಸ್ವತಃ ತಾನೇ ಕೈಗೊಳ್ಳಲು ಪೂರಕವಾಗಿದೆ.

ಒಂದು ವಾರದ ಅವಧಿಯಲ್ಲಿ ಚಂದ್ರಲೋಕಕ್ಕೆ ತೆರಳಿ ನಂತರ ಧರೆಗೆ ಮರಳಿಬಂದಂತೆ ಮಂಗಳಗ್ರಹದ ಯಾನವನ್ನು ಮಾನವ ಕೈಗೊಳ್ಳಲಾಗದು. ಅದಕ್ಕೆ ಕನಿಷ್ಠಪಕ್ಷ ಎರಡು ವರ್ಷಗಳ ಸಮಯ ಬೇಕಾಗುತ್ತದೆ. ಆ ನಡುವೆ ಅಂತರಿಕ್ಷದಲ್ಲಿ ಮಾನವ ದೇಹ ಎದುರಿಸುವ ಸಮಸ್ಯೆಗಳನ್ನು ಕುರಿತಂತೆ ಮಾಹಿತಿಯನ್ನು ಅಂತರಿಕ್ಷ ನಿಲ್ದಾಣಗಳು ಒದಗಿಸಿವೆ.

ಅಂತರಿಕ್ಷಯುಗದ ಆರಂಭದ ದಶಕಗಳಲ್ಲಿ ಬಹುಮಟ್ಟಿಗೆ ಪರೀಕ್ಷಾ ಪೈಲಟ್‌ಗಳನ್ನು (ಟೆಸ್ಟ್ ಪೈಲಟ್ಸ್) ಗಗನಯಾತ್ರಿಗಳಾಗಿ ಆರಿಸಲಾಗುತ್ತಿತ್ತು. ಏಕೆಂದರೆ ಅವರು ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಿರುತ್ತಿದ್ದರು. ಅಂತರಿಕ್ಷಯಾನದ ನಡುವೆ ಕಂಡುಬರುವ ಅಪಾರವಾದ ವೇಗ, ತೂಕ ಹೆಚ್ಚಿದ ಹಾಗೂ ತೂಕರಹಿತ ಸ್ಥಿತಿ, ಇಕ್ಕಟ್ಟಾದ ಜಾಗದಲ್ಲಿ ವಾಸ, ಇಂತಹ ಸನ್ನಿವೇಶಗಳಿಂದಾಗಿ ಪರೀಕ್ಷಾ ಪೈಲಟ್‌ಗಳೇ ಇದಕ್ಕೆ ಸೂಕ್ತವೆಂದು ಭಾವಿಸಲಾಗಿತ್ತು. ಆದರೆ 1980ರ ದಶಕದಿಂದ ವಿಜ್ಞಾನಿಗಳು ಹಾಗೂ ಇಂಜಿನಿಯರ್‌ಗಳು ಅಮೆರಿಕದ ಅಂತರಿಕ್ಷ ಶಟಲ್‌ನಲ್ಲಿ ತಂಡೋಪತಂಡವಾಗಿ ಭೂಕಕ್ಷೆಗೆ ತೆರಳಲು ಆರಂಭಿಸಿದರು. ಮಹಿಳೆಯರೂ ಅಂತರಿಕ್ಷಕ್ಕೆ ತೆರಳುವುದು ಸಾಮಾನ್ಯವಾಗಲಾರಂಭಿಸಿತು.

ಹೊಸ ಸಹಸ್ರವರ್ಷ (ಮಿಲೆನಿಯಂ) ಉದಯಿಸಿದಂತೆ ಚೀನಾ ಭೂಕಕ್ಷೆಗೆ ತನ್ನ ಗಗನಯಾತ್ರಿಯನ್ನು ಉಡಾಯಿಸಿದ ಮೂರನೆಯ ರಾಷ್ಟ್ರವಾಯಿತು (2003).

## ಅಂತರಿಕ್ಷ ಪ್ರವಾಸೋದ್ಯಮ

ಬಾಹ್ಯಾಕಾಶಯಾನ ಸುಲಭ ಎನ್ನುವಂತದ ಮೇಲೆ, ಕೋಟ್ಯಧಿಪತಿಗಳಾದ ಕೆಲವು 'ಅಂತರಿಕ್ಷ ಪ್ರವಾಸಿ'ಗಳು ರಷ್ಯಾದ ಸೊಯೂಜ್ ನೌಕೆಗಳಲ್ಲಿ ಭೂಕಕ್ಷೆಗೆ ತೆರಳಿ ಅಲ್ಲಿ ಭೂಮಿಯನ್ನು ಸುತ್ತುತ್ತಿದ್ದ 'ಐ.ಎಸ್.ಎಸ್.'ನ ರಷ್ಯಾದ ಭಾಗದಲ್ಲಿ ಕೆಲದಿನಗಳ ಕಾಲ ವಾಸಿಸಿ ಹಿಂತಿರುಗಿ ಬಂದರು. ಅದಕ್ಕಾಗಿ ಅವರು 20ರಿಂದ 25 ದಶಲಕ್ಷ ಡಾಲರ್‌ಗಳನ್ನು (160ರಿಂದ 200 ಕೋಟಿ ರೂಪಾಯಿ) ರಷ್ಯಾಗೆ ನೀಡಿ, ಕೆಲವು ತಿಂಗಳುಗಳ ಕಾಲ ಮಾಸ್ಕೋದ ಸಮೀಪದಲ್ಲಿರುವ 'ನಕ್ಷತ್ರ ನಗರ'ದಲ್ಲಿ ತರಬೇತಿ ಪಡೆಯಬೇಕಾಯಿತೆಂಬುದು ಬೇರೆ ವಿಷಯ!

'ವರ್ಜಿನ್ ಅಟ್ಲಾಂಟಿಕ್'ನ ರಿಚರ್ಡ್ ಬ್ರಾನ್ಸನ್, ಅಮೆಝಾನ್‌ನ ಜೆಫ್ ಬೆಝೋಸ್, ಟೆಸ್ಲಾ ಹಾಗೂ ಸ್ಪೇಸ್ ಎಕ್ಸ್‌ನ ಸ್ಥಾಪಕ ಎಲಾನ್ ಮಸ್ಕ್, ಮುಂತಾದ ವಿಶ್ವವಿಖ್ಯಾತ ವಾಣಿಜ್ಯೋದ್ಯಮಿಗಳು



'ಐ.ಎಸ್.ಎಸ್.'ನೊಳಗೆ ಭೋಜನದಲ್ಲಿ ನಿರತರಾದ ಗಗನಯಾತ್ರಿಗಳು. ಚಿತ್ರಕೃಪೆ: 'ನಾಸಾ'